## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 361/16

ಚಾ.ಸಾ. 98

ಪ್ರಾ.ಸಾ. 50

ಸಾಕ್ಷಿದಾರರ ಹೆಸರು – ದಯಾನಂದ ಭಟ್ಟ

ತಂದೆಯ ಹೆಸರು – ದತ್ತಾತ್ರೇಯ ಭಟ್ಟ

ವಯಸ್ಸು – 62 ವರ್ಷ

ಉದ್ಯೋಗ – ನಿವೃತ್ತ ಉಪನ್ಯಾಸಕರು

ವಾಸ್ತವ್ಯ – ಬನವಾಸಿ, ಶಿರಸಿ ತಾಲೂಕ

(ಇಂದು ದಿನಾಂಕಃ 21-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ನಾನು 2001 ರಿಂದ 2010 ರ ವರೆಗೆ ಎಂ.ಇ.ಎಸ್. ಪಿ.ಯು. ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕರ್ತವ್ಯನಿರ್ವಹಿಸಿದ್ದೇನೆ. ಸಮೀನಾ ಅಂಜುಮ್ ಅಬ್ದುಲ್ ಶೇಖ್ ಇವರು 1994 ರಿಂದ 1996 ರ ವರೆಗೆ ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿನಿಯಾಗಿ ವಾಣಿಜ್ಯ ವಿಭಾಗಕ್ಕೆ ಸೇರಿಕೊಂಡಿದ್ದರು. ನಂತರ 2002 ರಲ್ಲಿ ಕಾರವಾರ ನಗರ ಪೊಲೀಸ್ ಠಾಣೆ ಇವರು ಸಮೀನಾ ಅಂಜುಮ್ ಅಬ್ದುಲ್ ಶೇಖ್ ಇವರಿಗೆ ಸಂಬಂಧಪಟ್ಟಂತೆ ವ್ಯಾಸಂಗದ ಬಗ್ಗೆ ದಾಖಲಾತಿಯನ್ನು ಕೋರಿದ್ದರು. ಅದಕ್ಕೆ ಸಂಬಂಧಪಟ್ಟಂತೆ ನಾನು ವರ್ಗಾವಣೆ ಪ್ರಮಾಣಪತ್ರದ ದ್ವಿಪ್ರತಿಯನ್ನು ನೀಡಿದ್ದೇನೆ. ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.49 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 49(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 7 ನೇ ಆರೋಪಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ನಿ.ಪಿ.49 ಸಾರ್ವಜನಿಕ ದಾಖಲಾತಿ ಎಂದರೆ ಸರಿ. ಯಾರಾದರೂ ಕೇಳಿದರೆ ಕೊಡುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಯಾವುದೇ ದಾಖಲಾತಿಯನ್ನು ಕೇಳಿಲ್ಲ, ನಾನು ಯಾವುದೇ ದಾಖಲಾತಿಯನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ.

**ಪಾಟೀ ಸವಾಲುಃ** 1 ರಿಂದ 5, 9 ನೇ ಆರೋಪಿ ಪರ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ